ವಿಜಯವಾಣಿ
ಕನ್ನಡಿಗರ ಧ್ವನಿ

**Saturday 19th October 2019, Page No.11**

**Energy Forum in RV College**

# ಆರ್‌ವಿ ಕಾಲೇಜಲ್ಲಿ ಎನರ್ಜಿ ಫೋರಂ



ವಿಜಯವಾಣಿ ಚಿತ್ರ

ನಗರದ ಆರ್.ವಿ. ಇಂಜಿನಿಯರಿಂಗ್ ಕಾಲೇಜು ಅವರಣದಲ್ಲಿ ಆರಂಭಗೊಂಡ 'ಎನರ್ಜಿ ಟ್ರಾನ್ಸಿಷನ್ ಇನ್ ಜರ್ಮನಿ' ಟ್ರಾವೆಲಿಂಗ್ ಎಕ್ಸಿಬಿಷನ್‌ಗೆ ರಿಪಬ್ಲಿಕ್ ಆಫ್ ಜರ್ಮನಿಯ ಕಾನ್ಸುಲ್ ಜನರಲ್ ಮಾರ್ಗಿಟ್ ಹೆಲ್ವಿಗ್ ಬೊಯಿಟ್ಟೆ ಚಾಲನೆ ನೀಡಿದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಪರಿಸರ ಸಂರಕ್ಷಣೆ, ಜಾಗತಿಕ ತಾಪಮಾನ ಸರಿದೂಗಿಸುವುದು ಹಾಗೂ ಇಂಧನದ ಮೇಲಿನ ಅವಲಂಬನೆ ತಪ್ಪಿಸಲು ನೈಸರ್ಗಿಕ ಸಂಪನ್ಮೂಲಗಳು ಮಹತ್ವದ ಪಾತ್ರ ವಹಿಸಿವೆ.

ಈ ಕುರಿತು ಇಂಡೋ-ಜರ್ಮನ್ ಎನರ್ಜಿ ಫೋರಂ (ಐಜಿಇಎಫ್-ಎಸ್‌ಒ) ವತಿಯಿಂದ ನಗರದ ಆರ್.ವಿ. ಇಂಜಿನಿಯರಿಂಗ್ ಕಾಲೇಜು ಅವರಣದಲ್ಲಿ ಆರಂಭಗೊಂಡ 'ಎನರ್ಜಿ ಟ್ರಾನ್ಸಿಷನ್ ಇನ್ ಜರ್ಮನಿ' ಟ್ರಾವೆಲಿಂಗ್ ಎಕ್ಸಿಬಿಷನ್ ಮಾಹಿತಿ ಒದಗಿಸಲಿದೆ.

ಅ.18ರವರೆಗೆ ನಡೆಯುವ ಈ ಪ್ರದರ್ಶನವು ಸೌರ ಶಕ್ತಿ, ಪವನ ಶಕ್ತಿ, ಜಲ ಶಕ್ತಿಯಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ನವೀಕರಿಸಬಹುದಾದ ಶಕ್ತಿಯ ಅಭಿವೃದ್ಧಿಯಲ್ಲಿ (1970ರಿಂದ 2050ವರೆಗಿನ) ಹಂತ ಹಂತವಾಗಿ ಜರ್ಮನಿ ಮಾಡಿರುವ ಸಾಧನೆಗಳ ಪರಿಚಯ ಮಾಡಿಕೊಡಲಿದೆ.

**ಯುವಜನತೆ ಕೈಜೋಡಿಸಲಿ:** ಪ್ರದರ್ಶನಕ್ಕೆ ಚಾಲನೆ ನೀಡಿದ ಬೆಂಗಳೂರಿನ ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿಯ ಕಾನ್ಸುಲ್ ಜನರಲ್ ಮಾರ್ಗಿಟ್ ಹೆಲ್ವಿಗ್ ಬೊಯಿಟ್ಟೆ, ಇಂದು ಸವಾಲಾಗಿರುವ ಪರಿಸರ ವಿಪತ್ತನ್ನು ನಾವೆಲ್ಲ ಎದುರಿಸಬೇಕಿದೆ. ಇದಕ್ಕಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಅಪ್ಪಿಕೊಂಡು, ಪರಮಾಣು ಶಕ್ತಿಯನ್ನು ಹೊರ ಹಾಕುವ ಅಗತ್ಯವಿದ್ದು, ಇದಕ್ಕೆ ಯುವಜನತೆ ಕೈಜೋಡಿಸಬೇಕಿದೆ ಎಂದರು.

**ಜಾಗೃತಿ ಪ್ರದರ್ಶನ:** ಡೆಪ್ಯೂಟಿ ಕಾನ್ಸುಲ್ ಕಾರ್ಲ್ ಫಿಲಿಪ್, ಕಲ್ಲಿದ್ದಲು, ಇಂಧನ, ಪರಮಾಣು ಇವುಗಳಿಂದ ಅದ ಉಪಯೋಗ ಹಾಗೂ ಅನಾಹುತಗಳನ್ನು ಪರಿಗಣಿಸಿ, ಪರಿಸರಕ್ಕೆ ಯಾವುದೇ ಸಮಸ್ಯೆ ಆಗದಂತೆ ದೈನಂದಿಗೆ ಬಳಸಿಕೊಂಡು ಪರಿಸರ ಮಾಲಿನ್ಯ ತಡೆಗಟ್ಟುವ ಬಗ್ಗೆ ಪ್ರದರ್ಶನದಲ್ಲಿ ಜಾಗೃತಿ ಮೂಡಿಸಲಾಗುವುದು ಎಂದರು.

ಈಗಾಗಲೇ 60 ದೇಶಗಳಲ್ಲಿ 80 ಟ್ರಾವಲಿಂಗ್ ಪ್ರದರ್ಶನ ನಡೆಸಿ ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ ಕುರಿತು ಜಾಗೃತಿ ಮೂಡಿಸಿರುವ ಜರ್ಮನ್ ಎನರ್ಜಿ ಫೋರಂ ಮೊದಲ ಬಾರಿಗೆ ನಗರದಲ್ಲಿ ಪ್ರದರ್ಶನ ಆಯೋಜಿಸಿದೆ. ಮುಂದಿನ ದಿನಗಳಲ್ಲಿ ನವದೆಹಲಿ, ಮುಂಬೈನಲ್ಲೂ ಪ್ರದರ್ಶನ ಆಯೋಜಿಸುವ ಸಿದ್ಧತೆಯಲ್ಲಿದೆ ಎಂದರು.

ಕಾಲೇಜಿನ ಸಂಚಾಲಕರಾದ ಜೆ.ಅರ್. ನಟರಾಜ್ ಮತ್ತು ವಿಜಯ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

> **ಭವಿಷ್ಯದಲ್ಲಿ ಎಲ್ಲ ದೇಶಗಳು ನೈಸರ್ಗಿಕ ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳಲು ಪ್ರದರ್ಶನ ಸಹಕಾರಿ. ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ ಕುರಿತು ಪ್ರದರ್ಶನದಲ್ಲಿ ಚರ್ಚೆಗಳು ನಡೆಯಲಿದೆ. ಆರ್.ವಿ. ಕಾಲೇಜು ಸೌರ ಶಕ್ತಿ, ಮಳೆ ನೀರು ಕೊಯ್ಲು, ಕೊಳಚೆ ನೀರು ಸಂಸ್ಕರಣಾ ಘಟಕ ನಿರ್ಮಾಣ ಸೇರಿ ಪರಿಸರಸ್ನೇಹಿ ವ್ಯವಸ್ಥೆಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದೆ.**
>
> । ಪ್ರೊ. ಆ್ಯಂಥನಿ ರಾಜ್
> ಪ್ರಾಧ್ಯಾಪಕ, ಆರ್‌ವಿ ಇಂಜಿನಿಯರಿಂಗ್